ಓ ಎಸ್ ನಂಃ 48/2016

ಪಿ.ಡಬ್ಲ್ಯೂಃ 1

ಸಾಕ್ಷಿಯನ್ನು ದಿಃ 08-04-2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಡಿ.ಎಸ್.ಬಿ. ವಕೀಲರಿಂದಃ**

ದಾವಾ ಸ್ವಳದ ಆಸ್ತಿಯ ಕಮಿಶನ್ ಮಾಡುವ ದಿನ ನಾನು ಹಾಗೂ ಉಳಿದ ವಾದಿಯರು ಸ್ವತಃ ಹಾಜರಿದ್ದೆವು ಎಂದರೆ ಸರಿ. ಸದರಿ ದಿನದಂದು ಕಮಿಶನ್ ಮುಗಿಯುವವರೆಗೂ ನಮ್ಮ ವಕೀಲರಾದ ಎನ್.ಕೆ. ಶಾನಬಾಗ ವಕೀಲರು ಸಹ ಹಾಜರಿದ್ದರು ಎಂದರೆ ಸರಿ. ಸದರಿ ಜಾಗದಲ್ಲಿ ಕಮಿಶನ್ ಮಾಡುವ ಬೇಳಿಗೆ ನೀರಿನ ಪೈಪಲೈನ್ ಹಾದು ಹೋದ ಬಗ್ಗೆ ಅನುಮಾನ ವ್ಯಕ್ತವಾದ ಬಗ್ಗೆ ಕಮಿಶನರ್ ನೆಲವನ್ನು ಅಗೆದು ಪೈಪಲೈನ್ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಪರಿಶೀಲನೆ ಮಾಡಿದ್ದಾರೆ ಎಂದರೆ ಸರ್ವೇ ನಂ. 314/4 ರಲ್ಲಿ ಮಾತ್ರ ಅಗೆದು ಪರಿಶೀಲನೆ ಮಾಡಿರುತ್ತಾರೆ. ಸದರಿ ಜಾಗದಲ್ಲಿ ಅಗೆದು ಪರಿಶೀಲನೆ ಮಾಡಿದ ನಂತರ ಏನು ಕಂಡು ಬಂದಿತು ಎಂಬ ಬಗೆ ತಮ್ಮ ವರದಿಯಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿ. ಉಳಿದ ಜಾಗದಲ್ಲಿ ಪೈಪಲೈನ್ ಇದೆಯೋ ಇಲ್ಲವೋ ಎಂಬ ಬಗ್ಗೆ ಅಗೆದು ಪರಿಶೀಲನೆ ಮಾಡಿ ಎಂದು ಕಮಿಶನರ್ ಗೆ ಸೂಚನೆ ನೀಡಲು ನಿಮಗೆ ಏನಾದರು ತೊಂದರೆ ಇತ್ತೋ ಎಂದರೆ ಸಾಕ್ಷಿಯು ಸಾಕ್ಷಿಯು ಸರ್ವೇ ನಂ. 314/1 ರಲ್ಲಿ ಪೈಪಲೈನ್ ಇದೆ, ಸರ್ವೆ ನಂ. 315/2 ರಲ್ಲಿ ಸ್ವಲ್ಪ ಪೈಪಲೈನ್ ಇದೆ ಉಳಿದ ಎಲ್ಲ ಪೈಪಲೈನ್ ಗಳನ್ನು ತೆಗೆದುಬಿಟ್ಟಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸರ್ವೇ ನಂ. 314/1 ರ ಸ್ವಳ ಸೇರುವ ಜಾಗದಲ್ಲಿ ಪೈಪಲೈನ್ ಇರುವ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಸರ್ವೆ 314/1 ರ ಸ್ವಳದಲ್ಲಿಯೂ ಕೂಡ ಅಗೆದು ನೋಡಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂ. 314/1 ರಲ್ಲಿ ಪೈಪಲೈನ್ ಇರುವ ಕುರಿತಾಗಿ ಅಥವಾ ಹಿಂದೆ ಇದ್ದ ಕುರಿತಾಗಿ ಯಾವುದೇ ಕುರುಹು ಕಂಡು ಬಂದಿಲ್ಲ ಎಂದು ತಮ್ಮ ವರದಿಯಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. 314/8 ರಲ್ಲಿ ಎರಡು, ಮೂರು ಜಾಗಗಳಲ್ಲಿ ನೀರಿನ ಪೈಪಲೈನ್ ಅಸ್ತಿತ್ವದ ಕುರಿತು ಕಮಿಶನರ್ ಅಗೆದು ನೋಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸರ್ವೇ

ನಂ. 314/4 ಮತ್ತು 314/8ರ ಗಡಿಯಲ್ಲಿ ಅಗೆದು ನೋಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 314/1, 314/4, 314/5, 314/8 ಈ ಎಲ್ಲ ಹಿಸ್ಸಾ ನಂಬರಗಳಲ್ಲಿಯೂ ಕಮಿಶನರ್ ಪೈಪಲೈನ್ ಅಸ್ತಿತ್ವದ ಬಗ್ಗೆ ಅಗೆದು ನೋಡಲಾಗಿ ಯಾವುದೇ ಪೈಪಲೈನ್ ಅಸ್ತಿತ್ವದಲ್ಲಿ ಇಲ್ಲ ಎಂಬುವುದು ಕಂಡು ಬಂದಿದ್ದು ಅದರಂತೆ ತಮ್ಮ ವರದಿಯಲ್ಲಿ ನಮೂದಿಸಿರುವುದರಿಂದ ಸದರಿ ವರದಿಯು ವಮ್ಮ ಕೇಸಿಗೆ ವ್ಯತಿರೀಕ್ತವಾಗಿರುವುದರಿಂದ ಕಮಿಶನರ್ ಸ್ಥಳದಲ್ಲಿ ಯಾವುದೇ ಜಾಗವನ್ನು ಅಗೆಯಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸರ್ವೆ ನಂ. 314/4 ರ ಗಡಿಯಲ್ಲಿ ಅಗೆದು ನೋಡಿರುತ್ತಾರೆ ಎಂದು ನುಡಿಯುತ್ತಾರೆ.

ಸರ್ವೆ ನಂ. 316/3 ರಲ್ಲಿರುವ ನಮ್ಮ ಮನೆಗಳಿಂದ ಪಶ್ಚಿಮ ದಿಕ್ಕಿಗೆ ದಕ್ಷಿಣೋತ್ತರವಾಗಿ ರಾಜರಸ್ತೆ ಹಾದು ಹೋಗಿದೆ ಎಂದರೆ ಸರಿ. ಸದರಿ ರಾಜರಸ್ತೆಯಿಂದ ಉತ್ತರ ದಿಕ್ಕಿಗೆ ಸಾಗಿದ ನಂತರ ಸ್ವಲ್ಪ ದೂರದಲ್ಲಿ ಪೂರ್ವ-ಪಶ್ಚಿಮವಾಗಿ ಅಬ್ಬಿಕೆಳಗಿನಕೇರಿಗೆ ಹೋಗುವ ಓಣಿ ಇದೆ ಎಂದರೆ ಸರಿ. ಸದರಿ ಓಣಿಯಲ್ಲಿ ಪೂರ್ವ ದಿಕ್ಕಿಗೆ ಸಾಗಿದ ನಂತರ ಸದರಿ ಓಣಿ ಎರಡು ಕವಲಾಗಿ ದಕ್ಷಿಣ ದಿಕ್ಕಿಗೆ ಪ್ರತಿವಾದಿಯವರ ಮನೆಗೆ ಹೋಗಲು ಉತ್ತರ ದಿಕ್ಕಿಗೆ ಗೋಪಿಹಳ್ಳ ಮತ್ತು ಚಕ್ಕೆರೆ ಓಣಿಗೆ ಕವಲು ಒಡೆದಿದೆ ಎಂದರೆ ಸರಿ. ಸದರಿ ಗೋಪಿಹಳ್ಳ ಮತ್ತು ಚಕ್ಕೆರೆ ಓಣಿಯು ಸರ್ವೆ ನಂ. 317/5 ಅ ದ ಉತ್ತರದ ಗಡಿಗುಂಟ ಪೂರ್ವ-ಪಶ್ಚಿಮವಾಗಿ ಹಾದು ಹೋಗಿರುತ್ತದೆ ಎಂದರೆ ಸರಿ. ಸದರಿ ಓಣಿಯು ಹಾಗೆಯೇ ಮುಂದುವರಿದು ಮತ್ತೆ ಎರಡು ಕವಲಾಗಿ ದಕ್ಷಿಣ ದಿಕ್ಕಿಗೆ ಸರ್ವೆ ನಂ. 317/5 ಅ, 313/4, 313/3, 312/1 ಗಡಿಗುಂಟ ಹಾದು ಹೋಗುತ್ತದೆ ಎಂದರೆ ಸರಿ. ಸದರಿ ಓಣಿಯು ಉತ್ತರ ದಕ್ಕಿಗೆ ಬಂದು ಗೋಪಿಹಳ್ಳದವರೆಗೆ ಹೋಗಿದೆ ಎಂದರೆ ಸರಿ. ಸದರಿ ಓಣಿಯು ತದನಂತರ ದಕ್ಷಿಣ ದಿಕ್ಕಿಗೆ ಮುಂದುವರಿದು ಗದ್ದೆಬೈಯಲುವರೆಗೆ ಹಾದು ಹೋಗಿದೆ ಎಂದರೆ ಸರಿ.

ಕೋರ್ಟ ಕಮಿಶನರ್ ಸ್ಥಳ ಪರಿಶೀಲನೆಗೆ ಬಂದಾಗ ಈ ಮೇಲೆ ಹೇಳಿದ ಓಣಿಯಲ್ಲಿ ಎಲ್ಲಾ ಓಡಾಡಿ ತಮ್ಮ ವರದಿಯಲ್ಲಿ ನಮೂದಿಸಿದ್ದಾರೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ವರದಿಯಲ್ಲಿ ಸುಳ್ಳು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಓಣಿಯಲ್ಲಿ ನೀರು ಇದ್ದು ಇದರ ಬಗ್ಗೆ ವರದಿಯಲ್ಲಿ ನಮೂದಿಸಿರುವುದಿಲ್ಲ. ಕಮಿಶನರ್

ತಮ್ಮ ವರದಿಯಲ್ಲಿ ಈ ಮೇಲೆ ಹೇಳಿದ ಓಣಿ ಹಾಗೂ ದಾರಿಯ ಕುರಿತು ವಸ್ತುಸ್ಥಿತಿಯಂತೆ ವರದಿಯನ್ನು ಸಲ್ಲಿಸಿದ್ದರೂ ಸಹ ಸದರಿ ವರದಿಯು ನನಗೆ ವ್ಯತಿರೀಕ್ತವಾಗಿದೆ ಎಂಬ ಕಾರಣದಿಂದ ಸುಳ್ಳು ಬರೆದಿದ್ದಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ನಮೂದಿಸಿದಂತೆ ಯಾವುದೇ ಕಾಲುದಾರಿ ಹಾಗೂ ನೀರು ಹರಿಯುವ ಪೈಪಲೈನ್ ಪ್ರತಿವಾದಿಯವರ ಸ್ಥಳದಲ್ಲಿ ಅಸ್ತಿತ್ವದಲ್ಲಿ ಇದ್ದದ್ದೇ ಇಲ್ಲ ಎಂದರೆ ಸರಿಯಲ್ಲ.

2001ರಲ್ಲಿ ಇದೇ ಚೆಕ್ಕರೆ ಹಾಗೂ ಗೋಪಿಹಳ್ಳದ ಓಣಿ ಸಂಬಂಧಿಸಿದಂತೆ ನಾನು ಹಾಗೂ ಇನ್ನೀತರ 16 ಜನರು ಸೇರಿ ಜಿಲ್ಲಾಧಿಕಾರಿ, ಸಹಾಯ ಕಾರ್ಯನಿಶವಾಹಕ ಅಭಿಯಂತರರು, ಲೋಕುಪಯೋಗಿ ಇಲಾಖೆ ಕುಮಟಾ, ಗಜಾನನ ಎಸ್ ಗುನಗಾ ಎನ್ನುವ ಗುತ್ತಿಗೆದಾರರಿಗೆ ಸದರಿ ಓಣಿ ನಮಗೆ ತಿರುಗಾಡಲು ಇರುವ ಓಣಿಯಾಗಿದ್ದು ಆ ಓಣಿಯಲ್ಲಿ ಗುಡ್ಡದ ಮಳೆಗಾಲದ ನೀರು ಹಾಗೂ ರಾಜರಸ್ತೆಯಿಂದ ಮಳೆಗಾಲದ ನೀರನ್ನು ರಸ್ತೆಯಲ್ಲಿ ಪಶ್ಚಿಮ ದಿಕ್ಕಿಗೆ ಹೋಗುವ ರೀತಿಯಲ್ಲಿ ಯಾವುದೇ ಪೈಪಲೈನ್ ನ್ನು ಅಳವಡಿಸಿ ನೀರು ಹರಿಸಿದರೆ ನಮಗೆ ತಿರುಗಾಡಲು ತೊಂದರೆ ಆಗುತ್ತದೆ ಎಂದು 03-08-2001ರಂದು ಕುಮಟಾದ ಹಿರಿಯ ನ್ಯಾಯವಾದಿ ಶ್ರೀ ಎಸ್.ಜಿ. ಶಾಸ್ತ್ರಿ ವಕೀಲರ ಮೂಲಕ ನೋಟಿಸ್ ನ್ನು ನೀಡಿರುತ್ತೇವೆ ಎಂದರೆ ಸರಿ. ದಿಃ 24-01-2001 ರಂದು ಈ ಮೇಲೆ ಹೇಳಿದ ತಿರುಗಾಡುವ ಓಣಿಯಲ್ಲಿ ಮಳೆಗಾಲದ ನೀರನ್ನು ಹರಿಸುವಂತೆ ಕಾಮಗಾರಿ ನಡೆಸಿದರೆ ನಮ್ಮ ಮನೆಗೆ ಮತ್ತು ಸಾಗುವಾಳಿ ಮಾಡಲು ಓಡಾಡಲು ತೊಂದರೆ ಯಾಗುತ್ತದೆ ಎಂದು ಲಿಖಿತವಾಗಿ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ದಿಃ 27-01-2001 ರಂದು ಈ ಮೇಲೆ ಹೇಳಿದ ತಿರುಗಾಡುವ ಓಣಿಯಲ್ಲಿ ಮಳೆಗಾಲದ ನೀರನ್ನು ಹರಿಸುವಂತೆ ಕಾಮಗಾರಿ ನಡೆಸಿದರೆ ನಮ್ಮ ಮನೆಗೆ ಮತ್ತು ಸಾಗುವಾಳಿ ಮಾಡಲು ಓಡಾಡಲು ತೊಂದರೆ ಯಾಗುತ್ತದೆ ಎಂದು ಲಿಖಿತವಾಗಿ ಗ್ರಾಮ ಪಂಚಾಯತ್ ಅಧ್ಯಕ್ಷರು, ವಾಲಗಳ್ಳಿ ಇವರಿಗೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ಪಂಚಾಯತ್ ಅಧ್ಯಕ್ಷರಿಗೆ ನೀಡಿದ ತಕರಾರಿನಲ್ಲಿ ನನ್ನ ಸಹಿ ಇರಬಹುದು ಆದರೆ ಅದರಲ್ಲಿ ಇರುವ ಮಾಹಿತಿ ನನಗೆ ಗೊತ್ತಿಲ್ಲ. ಸದರಿ ಅರ್ಜಿಗೆ ಪ್ರತಿವಾದಿಯವರು ಮತ್ತು ಕೇರಿಯ ಜನರು ಮಳೆಗಾಲದ ನೀರು ಹರಿಯುವ

ಕಾಮಗಾರಿಯನ್ನು ನಡೆಸಿದರೆ ಜನರಿಗೆ ಜಾನುವಾರುಗಳಿಗೆ ಓಡಾಡಲು ತೊಂದರೆ ಆಗುತ್ತದೆ ಆ ಬಗ್ಗೆ ತಕರಾರು ನೀಡುತ್ತಿದ್ದೇವೆ ಹೇಳಿದ್ದರಿಂದ ನಾನು ಸಹಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯವರು ಹಾಗೂ ಕೇಳಿಯ ಜನ ಸದರಿ ತಕರಾರುನ್ನು ನೀಡಿದ ನಂತರ ಕಾಮಗಾರಿಯನ್ನು ಸ್ಥಗಿತಗೊಳಿಸಿರುತ್ತಾರೆ ಎಂದರೆ ಸರಿ. ನಂತರ ಸ್ವಲ್ಪ ಸಮಯದ ನಂತರ ಪುನಃ ಕಾಮಗಾರಿಯನ್ನು ಆರಂಭಿಸಿರುತ್ತಾರೆ. ನಾವು ನೋಟಿಸ್ ನೀಡಿದ ಎರಡು ವರ್ಷದ ನಂತರ ಸದರಿ ಕಾಮಗಾರಿಯನ್ನು ಪುನಃ ಮಾಡಿರುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಕುಮಟಾ